doc-383
T.P-2

R No KRNN 12 17 - 10 -1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★
58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
- For Influential Publicity -

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಜಾರಕ್ಷಿತ ಎಂ. ಎಸ್. ಕೃಷ್ಣರಾವ್ [3 ಪೈಸೆ

ಕೇಂದ್ರದಿಂದ ಹತ್ತು ಮಿಲಿಯ ಟನ್ ಧಾನ್ಯ ಹಂಚಿಕೆ

ಕರ್ನಾಟಕ ಸರ್ಕಾರ

ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿ, ಕಬಿನಿ ಜಲಾಶಯ ವಿಭಾಗ, ಕಬಿನಿ ಕಾಲೋನಿ, ಹೆಚ್. ಡಿ ಕೋಟೆ ತಾಲ್ಲೂಕು. ಮೈಸೂರು ಜಿಲ್ಲೆ.

ಕಾಲ ವಿಸ್ತರಣೆಯ

ನೋಟೀಸು

ವಿಷಯ : —

1) ಟೆಂಡರ್ ಪ್ರಕಟಣೆ ನಂ. 4/74-75 ತಾ|| 13-6-74 ಕಬಿನಿ ಅಣೆಕಟ್ಟೆ ಅಸ್ತಿ ಭಾರಕ್ಕೆ ಕರ್ಟನ್ ಗ್ರೌಟಿಂಗ್ ನಡೆಸುವುದಕ್ಕಾಗಿ.

2) ಕಾಲ ವಿಸ್ತರಣೆಯ ನೋಟೀಸು ತಾ|| 11-7-74

3) -ಡಿಟೋ- -ಡಿಟೋ- 1-8-74

4) -ಡಿಟೋ- -ಡಿಟೋ- 31-8-74

ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಖಾಲಿ ಟೆಂಡರ್ ಫಾರಂಗಳನ್ನು ಕೊಡುವ ಮತ್ತು ಅದನ್ನು ಸ್ವೀಕರಿಸುವ ಕಾಲ ಅವಧಿಯನ್ನು ಈ ಕೆಳಗೆ ಕಂಡಂತೆ ಮತ್ತೆ ಹೆಚ್ಚಿಸಿದೆ :—

28-10-74 ರಿಂದ 2-11-74 ರ ವರೆಗೆ ಖಾಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು ಪೂರ್ಣಗೊಳಿಸಲಾದ ಟೆಂಡರ್ ಡಾಕ್ಯುಮೆಂಟ್‌ಗಳನ್ನು, ಈ ಮೊದಲು ಪ್ರಕಟಣೆ ಮಾಡಿರುವಂತೆ 7-10-74 ಕ್ಕೆ ಬದಲಾಗಿ 20-11-74 ರ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸಲಾಗವುದು.

ಇತರ ಷರತ್ತುಗಳು ಬದಲಾವಣೆ ಇಲ್ಲದೆ ಹಾಗೆಯೇ ಇರುವುವು

ಸಹಿ/- ಎ ವಾಸಣ್ಣ,
ಎಕ್ಸಿಕ್ಯುಟೀವ್ ಇಂಜಿನಿಯರ್,
ಕಬಿನಿ ಜಲಾಶಯ ವಿಭಾಗ

★ ಹೈದರಾಬಾದು— ಅಮೇರಿಕಾದ ಒಂದು ಬ್ಯಾಂಕಿನಲ್ಲಿ ರಹಸ್ಯ ಲೆಕ್ಕ ವ್ಯವಹರಿಸುತ್ತಿದ್ದ ರಾಜಮಹೇಂದ್ರ ಬಾಪ್ಟಿಸ್ಟು ಮಿಷನರಿ ಬಂಧಿಸಲ್ಪಟ್ಟನು

ಮಿಸೆ ಸಂಗ್ರಹಣೆ

ಅಹಮದಾಬಾದು— ಕುರಿಕಾಯುವವರ ಮಿಸೆ ಶೇಖರಿಸುವದು ಕಾಡಿ ಗ್ರಾಮದ ಒಬ್ಬ ಪೋಲೀಸು ಸಬ್ ಇನ್ಸ್‌ಪೆಕ್ಟರಿನ ಹವ್ಯಾಸವಾಗಿದೆ – ರಬರಿಯವರೆಂದು ಕರೆಯಲ್ಪಡುವ ಆ ಜನರ 14 ಮಂದಿ ಇವನಿಗೆ ಆಹುತಿಯಾಗಿದ್ದಾರೆ – ಈಚೆಗೆ ಆ ಹಳ್ಳಿಗೆ ಬಂದ ಒಬ್ಬ ಗಿರಣಿ ಕಾರ್ಮಿಕ ರಬರಿಯವನನ್ನು ಹಿಡಿದುಕೊಂಡು ಈ ಪೋಲೀಸನು ಅವನ ವಿಸೆಯನ್ನು ಬೋಳಿಸಿಕೊಂಡನು – ಅವನು ಒಪ್ಪದೆ ಹೋರಾಡಿದ್ದರಿಂದ ಅವನ ತುಟಿ ಕೊಯ್ದು ಹೋಗಿ ರಕ್ತ ಸುರಿಯುವಂತಾಯಿತು – ಇದನ್ನು ಕಂಡ ರಬರಿ ಜನರು ಕ್ರೋಧಗೊಂಡು ಅಹಮದಾಬಾದಿನಲ್ಲಿ ಗೌರ್ನರ್ ಮತ್ತು ಪೋಲೀಸು ಇನ್ಸ್‌ಪೆಕ್ಟರ್ ಜನರಲ್‌ರನ್ನು ಕಾಣಲು ಹೋದರು ; ಅವರು ಸಿಕ್ಕಲಿಲ್ಲ ; ನಂತರ ಹಂಗಾಮಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಲೆಯುವಾರಲ್ಲಿ ತಮ್ಮ ಗೋಳನ್ನು ಹೇಳಿಕೊಂಡರು

★

ಆಲ್ಮೋರಾ ಬಂಪ್

ಆಲ್ಮೋರಾ— ಜೋನೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಪ್ರಾಚೀನ ವಸ್ತು ಶೋಧನಾ ಇಲಾಖೆಯ ಸಂಗ್ರಹಾಲಯದಲ್ಲಿದ್ದ, ಕಳುವಾಗಿರುವ 100 ಕೆಜಿ ತೂಕದ ಪುರಾತನ ಅಸ್ತಾಹತು ವಿಗ್ರಹವನ್ನು ಪತ್ತೆಮಾಡುವುದರಲ್ಲಿ ಅಧಿಕಾರಿಗಳು ವಿಫಲರಾಗಿರುವುದನ್ನು ಪ್ರತಿಭಟಿಸಿ ಆಲ್ಮೋರಾ ಬಂದ್ ನಡೆಸಲಾಯಿತು.

★

ಗೋಧಿ ಬರುತ್ತೆ

ನವದೆಹಲಿ– 1 ಮಿಲಿಯ ಟನ್ನು ಗೋಧಿ ವರೆಗೆ, ತಿಂಗಳಿಗೆ 2 ಲಕ್ಷ ಟನ್ನು ಗೋಧಿಯಂತೆ ಭಾರತಕ್ಕೆ ಹಡಗಿನಲ್ಲಿ ಕಳುಹಿಸಲಾಗುವುದೆಂದು ಪಶ್ಚಿಮ ಜರ್ಮನಿಯ ರಾಯಭಾರಿ ಕಚೇರಿ ಪ್ರೆಸ್ ನೋಟು ತಿಳಿಸುತ್ತದೆ.

ಡಾ || ಮೋದಿ

ನೇತ್ರದಾನಿ ಪದ್ಮಭೂಷಣ ಡಾ || ಎಂ. ಸಿ. ಮೋದಿಯವರು ತಾ || 20 ರಂದು ಬೆಳಗಾಂ ಇಸ್ಕೀಲಿಯಾ ಹೈ ಸ್ಕೂಲ್ ಕಂಪೌಂಡ್‌ನಲ್ಲಿ ಉಚಿತ ನೇತ್ರ ಆಪರೇಷನ್ ಶಿಬಿರ ನಡೆಸುವರು

★

ರಷ್ಯಾದ ರಾಮಾಯಣ ನಾಟಕ ತಂಡ

ನವದೆಹಲಿ— ಮಾಸ್ಕೊ ಕೇಂದ್ರ ಮಕ್ಕಳ ನಾಟಕರಂಗದ 45 ಸದಸ್ಯರ ತಂಡವು ಭಾರತದ ಪೌರಾಣಿಕ ರಾಮಾಯಣದ ರಷ್ಯಾದ ರೂಪಾಂತರವನ್ನು ಕಮಾನಿ ನಾಟಕ ಮಂದಿರದಲ್ಲಿ ಅಭಿನಯಿಸಿತು – ರಷ್ಯಾದಲ್ಲಿ ಈ ನಾಟಕವು 14 ವರ್ಷಗಳಿಂದ ಇಂದೂ ಅಭಿನಯಗೊಳ್ಳುತ್ತಿದೆ.

★

ದೇವತೆ ದಯೆಗೆ

ವಿಶಾಖಪಟ್ಟಣ— ಮಳೆ ದೇವರನ್ನು ಒಲಿಸಲು ರಾಜ್ಯಾದ್ಯಂತ ಕೆಲವು ದೇವಸ್ಥಾನಗಳಲ್ಲಿ ಅಭಿಷೇಕ ಮಾಡುವಂತೆ ಇಲಾಖೆ ಸೂಚಿಸಿತ್ತು. ರಾಜ್ಯಾದ್ಯಂತ ಮಳೆ ಆಗಿದೆ ಅಭಿಷೇಕದ ಫಲ ಮುಖ್ಯ ಮಂತ್ರಿಯವರಿಗೆ ಹರ್ಷಗೊಳಿಸಿದೆ.

★

ಕನ್ನಡ ರಾಜ್ಯೋತ್ಸವ

ಬರಲಿರುವ ಕನ್ನಡ ರಾಜ್ಯೋತ್ಸವವನ್ನು ಚೆನ್ನಾಗಿ ಆಚರಿಸೋಣ ಎಂದು ಮೈಸೂರು ನಗರ ಚಲನಚಿತ್ರ ಪ್ರದರ್ಶಕರ ಸಂಘದ ಅಧ್ಯಕ್ಷರಾದ ಶ್ರೀ ಎಂ ಬಿ ಬೋರಯ್ಯ ನವರು ನಿನ್ನೆ ಸಂಜೆ ಕನ್ನಡ ಚಳುವಳಿಗಾರರ ಸಭೆಯಲ್ಲಿ ತಿಳಿಸಿದರು. ವುಡ್‌ಲಾಂಡ್ಸ್ ಮಾಲೀಕರಾದ ಶ್ರೀ ಎಂ. ರಾಮಮೂರ್ತಿಯವರು ಸಭೆಯಲ್ಲಿ ಉಪಸ್ಥಿತರಿದ್ದರು.

● ಕೇಂದ್ರ ಮಂತ್ರಿ ಶ್ರೀ ಕೆ ಸಿ ಪಂತರು ಬೆಂಗಳೂರಿನಲ್ಲಿ ನಿನ್ನೆ ಪತ್ರಿಕೆಯವರೊಡನೆ ಮಾತನಾಡುತ್ತಾ, 5 ನೇ ಯೋಜನೆಯಲ್ಲಿ ಥರ್ಮಲ್ ಯಂತ್ರಾಗಾರವನ್ನು ರಾಜ್ಯಕ್ಕೆ ಸಿದ್ಧಗೊಳಿಸಿದರು.

ಆಹಾರ ಧಾನ್ಯ ಹಂಚಿಕೆ

ಮದರಾಸು– ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸರಕಾರ 10 ಮಿಲಿಯ ಟನ್ ಆಹಾರ ಧಾನ್ಯ ಹಂಚಲು ಯೋಜಿಸಿರುವದೆಂದು ಕೇಂದ್ರ ಆಹಾರ ಸ್ಟೇಟ್ ಮಂತ್ರಿ ಶ್ರೀ ಶಿಂಡೆಯವರು ಪತ್ರಿಕೆಯವರಿಗೆ ತಿಳಿಸಿದರು.

ಪ್ರಶಂಸನೀಯ ಏರ್ಪಾಡು

ಬೆಂಗಳೂರು– ಕರ್ನಾಟ ಮಂತ್ರಿ ಮಂಡಲದ ಸಪ್ತಾಹಿಕ ಸಭೆಗೆ ಕಾಲಕ್ಕೆ ಸರಿಯಾಗಿ ಬರದೆ ತಡವಾಗಿ ಬಂದವರಿಗೆ ಒಂದು ಜುಲ್ಮಾನೆಯ ಏರ್ಪಾಡಿದೆ - ಮುಖ್ಯ ಮಂತ್ರಿಗಳೂ ಒಂದು ಸಾರಿ ಕೊಟ್ಟಿರುವರಂತೆ.

ದನಕರುಗಳ ಕೊಲೆ

ಅಮೇರಿಕಾದ ಕುರ್ಟಿಸ್‌ನಲ್ಲಿ ಕಾಸ್ಟ್ರೀಯ ರೈತ ಸಂಘದವರು ದನಗಳ ಕಡಿಮೆ ಬೆಲೆ ಬಗ್ಗೆ ಕುಪಿತರಾಗಿ 658 ಕರುಗಳನ್ನು ಕತ್ತು ಹಿಸುಕಿ ಅಥವಾ ಗುಂಡು ಹೊಡೆದು ಕೊಂದು ಗುಳಿಗಳಿಗೆ ಹಾಕಿದರು.

ಪ್ಲಾಟಿನಂ ಮತ್ತು ಚಿನ್ನ ಅಪಹರಣೆ

ಬೊಂಬಾಯಿ— ಬಾಬಾ ಅಣುಶಕ್ತಿ ಸಂಶೋಧನಾ ಕೇಂದ್ರದಲ್ಲಿನ ರೂ. 11 ಲಕ್ಷ ಬೆಲೆಯ ಪ್ಲಾಟಿನಂ ಮತ್ತು ಚಿನ್ನ ಅಪಹರಿಸಿದ ಆಪಾದನೆಗಾಗಿ ಅಲ್ಲಿಯ ವಿಜ್ಞಾನಿ ಸ್ಟಾವಲದದಾಸ್‌ರನ್ನು ಬಂಧಿಸಲಾಗಿದೆ.

ಛತ್ರಿ
ರೇನ್ ಕೋಟುಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್
A Firm known for
Genuine Good Business.

ನಿಧನ

ಮೈಸೂರು— ಸುಪ್ರಸಿದ್ಧ ಆಯುರ್ವೇದ ಪಂಡಿತರಾಗಿದ್ದ ಶ್ರೀ ಪಿ. ಹೆಚ್. ಚಂದ್ರಭೂಷಣಸಿಂಗ್‌ರವರು ಮಂಗಳವಾರ ಸಂಜೆ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ.

ಮೂಕರು ಕಾರ್ಯಕ್ಕಾಗುವ ಹುಲ್ಲು

ಪೂನಾ— ಕಾಗದ ತಯಾರಿಕೆ, ಸುಗಂಧದ್ರವ್ಯ ತಯಾರಿಕೆ, ಮತ್ತು ದನದ ಮೇವಿಗೆ ಉಪಯೋಗವಾಗವಾಗುವ ಒಂದು ಬಗೆ ಹುಲ್ಲನ್ನು ಮಹಾರಾಷ್ಟ್ರ ವೈಸಾಯ ವಿದ್ಯಾಲಯದ ಒಂದು ತಂಡವು ಪತ್ತೆ ಮಾಡಿದೆ.

ಪುರಾತನ ವಿಷ್ಣು ವಿಗ್ರಹ

ಡೆಲ್ಲಿ— ಕಲ್ಕತ್ತಾದ ಪರಿಷತ್ ಶೇಖರಣದಲ್ಲಿದ್ದ ರೂ. 3 ಲಕ್ಷದ ಅಪೂರ್ವ 11 ನೇ ಶತಮಾನದ ಪುರಾತನ ಕಂಚಿನ 1965 ರಲ್ಲಿ ಕಳುವಾಗಿದ್ದು, ಅಮೇರಿಕಾದ ಬಾಸ್ಟ್ ಲಲಿತಕಲಾ ಮ್ಯೂಜಿಯಂನಲ್ಲಿದ್ದುದು ಈಗ ಅಲ್ಲಿಂದ ವಾಪಸ್ಸು ಬಂದಿದ್ದು ಇಷ್ಟಿಯ ರಾಷ್ಟ್ರೀಯ ಮ್ಯೂಸಿಯಂನಲ್ಲಿದೆ ; ಅದನ್ನು ಕಲ್ಕತ್ತಾಕ್ಕೆ ಅದರ ಹಿಂದಿನ ಸ್ಥಾನದಲ್ಲಿಡಲು ಕಳುಹಿಸಲಾಗುವುದು

ದೈಹಿಕ ಶಿಕ್ಷೆ ಕೂಡದು

ಪಶ್ಚಿಮ ಜರ್ಮನಿಯಲ್ಲಿ ಸ್ಕೂಲುಗಳಲ್ಲಿ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷೆ ಇರಬಾರದೆಂಬುವುದಕ್ಕೆ ಸಾರ್ವಜನಿಕರ ಬೆಂಬಲ ಹೆಚ್ಚುತ್ತಿದೆ.

Help The Gorakshana
— Humanitarian Propaganda Monthly....

SHAKTI
SUDHA

A Superb Tonic

Protect the Cow

Contribute Liberally
to the National Defence Fund

Quality Printing Neat Binding

Lakshminarasimha Press

Sivarampet, Mysore 1

ವುಡ್‌ಲಾಂಡ್ 18 10 74 ರಿಂದ

ಅಮೋಘ 5 ನೇ ವಾರ

ಇಮ್ತಿಹಾನ್ ● Imtihan

★ ತನುಜ ★ ವಿನೋದ ಖನ್ನ ★ ಬಿಂದು
ಅಭಿನಯಿಸಿರುವ ಅಮೋಘ ಹಿಂದಿ ವರ್ಣರಂಜಿತ ಕಲಾಕೃತಿ

ನಿರ್ದೇಶನ – ಮದನ್ ಸಿಂಹ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ ೫ ಪ್ರದರ್ಶನಗಳು

ಅ ಪೆ ರಾ 17 10 74 ರಿಂದ

ಆ ಗಲೇ ಲಗ್ ಜಾ

ಪಾತ್ರ – ಶಶಿಕಪೂರ್ ಶರ್ಮಿಲಾ ಟಾಗೂರ್ ಶತ್ರುಘ್ನ ಸಿನ್ಹಾ ಓಂ ಪ್ರಕಾಶ್

ಈಸ್ಟ್‌ಮನ್ ಕಲರ್ ಚಿತ್ರ ಸಂಗೀತ – ಆರ್. ಡಿ. ಬರ್ಮನ್

ಮೋಹಕ ಅಭಿನಯದ ಮಹೋನ್ನತ ಈಸ್ಟ್‌ಮನ್ ಕಲರ್
ಹಿಂದಿ ಚಿತ್ರ

ದಿನ ೩ ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram Mysore